ಅಧ್ಯಕ್ಷರು: ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡತಕ್ಕಂಥ ಪ್ರಶ್ನೆಗೆ ಉತ್ತರ ಕೊಡಬೇಕೆಂದು ಏನಿಲ್ಲ. ತಾವು ವಿಷಯವನ್ನು ಮೆನ್‌ಷನ್ ಮಾಡಬಹುದು.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೆ ಸದರಿ ವಿಷಯವನ್ನು ಮೆನ್‌ಷನ್ ಮಾಡಿದ್ದೇನೆ. ಆನಂತರ, ಇದಕ್ಕೆ ಸಂಬಂಧಪಟ್ಟಂತೆ ಹೇಳಿಕೆ ಕೊಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು.

Mr. SPEAKER: No, I can't compel a Minister to answer. ತಾವು ಮೆನ್‌ಷನ್ ಮಾಡಬಹುದು ಅಷ್ಟೇ. ಆದರೆ ಇದಕ್ಕೆ ಉತ್ತರ ಕೊಡಬೇಕೆಂದು ನಿಯಮವಿಲ್ಲ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಇದು ರಾಜ್ಯದ ಗಡಿ ಪ್ರಶ್ನೆಯಾಗಿದೆ. ತಮಿಳುನಾಡು ರಾಜ್ಯದವರು 1 ಕಿಲೋಮೀಟರ್‌ನಷ್ಟು ಜಾಗವನ್ನು ಚಾಮರಾಜನಗರ ಜಿಲ್ಲೆಯ ಗಡಿ ಭಾಗವನ್ನು ಆಕ್ರಮಿಸಿಕೊಂಡಿದ್ದಾರೆ.

ಅಧ್ಯಕ್ಷರು: ಇದಕ್ಕೆ ಮಾನ್ಯ ಗೃಹ ಸಚಿವರು ಉತ್ತರ ಕೊಡುತ್ತೇನೆಂದು ಹೇಳಿದ್ದೀರಾ? ಉತ್ತರ ಕೊಡುತ್ತೇನೆಂದು ತಾವು ಹೇಳಿದ್ದರೆ ಮಾತ್ರ ಉತ್ತರ ಕೊಡಿ. ಒಂದು ವೇಳೆ ಇಲ್ಲದಿದ್ದರೆ ಉತ್ತರ ಕೊಡಬೇಕಾಗಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ಯಾರಿಗೆ ಸಂಬಂಧಪಡುತ್ತದೆ ಎನ್ನತಕ್ಕಂಥದ್ದನ್ನು ನೋಡಬೇಕು. ಇದು ಮಾನ್ಯ ಮುಖ್ಯಮಂತ್ರಿಯವರಿಗೆ ಬರಬಹುದು.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ಸದರಿ ವಿಷಯವನ್ನು ಮೊನ್ನೆ ದಿವಸ ನಾನು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹಾಗೂ ಮಾನ್ಯ ಚಂದ್ರೇಗೌಡರೂ ಕೂಡ ಇಲ್ಲಿದ್ದರು.

Mr. SPEAKER: There is no complusion to answer. ಆದರೂ ಕೂಡ ತಾವು ಎದ್ದು ನಿಂತುಕೊಂಡು ಟೈಂ ವೇಸ್ಟ್ ಮಾಡುತ್ತಿದ್ದೀರಿ.

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ನಾನು ಟೈಂ ವೇಸ್ಟ್ ಮಾಡುತ್ತಿಲ್ಲ.

ಅಧ್ಯಕ್ಷರು: ಇದಕ್ಕೆ ಉತ್ತರ ಕೊಡುತ್ತೇವೆಂದು ನಿಮಗೆ ಯಾರು ಹೇಳಿದರು?

ಶ್ರೀ ಹೆಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದಾರೆ.

ಅಧ್ಯಕ್ಷರು: ಹಾಗಾದರೆ, ಮಾನ್ಯ ಮುಖ್ಯಮಂತ್ರಿಯವರು ಬಂದ ಮೇಲೆ ಕೇಳೋಣ.

ಆ) ಕೋಲಾರ ಜಿಲ್ಲೆಯಲ್ಲಿ ಕೆರೆಗಳ ತೂಬುಗಳನ್ನು ಮುಚ್ಚುವ ಬಗ್ಗೆ

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಶೂನ್ಯ ವೇಳೆಯಲ್ಲಿ ಕೋಲಾರ ಜಿಲ್ಲೆಯಲ್ಲಿರತಕ್ಕಂತ ಕೆರೆಗಳ ತೂಬುಗಳನ್ನು ಮುಚ್ಚುವ ವಿಷಯಕ್ಕೆ ಸಂಬಂಧಪಟ್ಟಂತೆ ಸಣ್ಣ ನೀರಾವರಿ ಇಲಾಖೆಯ ಮಂತ್ರಿಗಳು ಇದ್ದಂಥ ಸಂದರ್ಭದಲ್ಲಿ ಪ್ರಸ್ತಾಪ ಮಾಡಬೇಕೆಂದು ನಾನು ಕೇಳಿದ್ದೆ. ಈಗ ಮಾನ್ಯ ಸಣ್ಣ ನೀರಾವರಿ ಮಂತ್ರಿಗಳಿರುವುದಿರಂದ ನನಗೆ ಎರಡು ನಿಮಿಷ ಮಾತನಾಡುವುದಕ್ಕೆ ಅವಕಾಶ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು: ಈಗ ರೈಸ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ: ಡೆಂಗ್ಯು ಜ್ವರದ ಬಗ್ಗೆ ಮಾನ್ಯ ಸೋಮಶೇಖರ್‌ರವರು ಹೇಳಿಕೆ ಕೊಡಬೇಕೆಂದು ಕೇಳಿದ್ದರು. ಆದ್ದರಿಂದ, ಇದಕ್ಕೆ ಸಂಬಂದಪಟ್ಟಂತೆ ಉತ್ತರ ಕೊಡುತ್ತೇನೆ.

ಅಧ್ಯಕ್ಷರು: ಮಾನ್ಯ ಸೋಮಶೇಖರ್‌ರವರು ಇಲ್ಲಿಲ್ಲ. ಅವರು ಬಂದ ಮೇಲೆ ಕೇಳೋಣ. ನೀರು ಮೇಲಕ್ಕೆ ಬರುವ ದೃಷ್ಟಿಯಿಂದ ಕರೆಗಳ ತೂಬುಗಳನ್ನು ಮುಚ್ಚುವ ವಿಚಾರವನ್ನು ಅವರು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ): ಮಾನ್ಯ ಅಧ್ಯಕ್ಷರೆ, ಇಲ್ಲಿ ಚರ್ಚೆ ಮಾಡತಕ್ಕಂಥ ಅವಶ್ಯಕತೆ ಇಲ. ಇದಕ್ಕೆ ಸಂಬಂಧಪಟ್ಟಂತೆ ಅವರೂ ಕೂಡ ಹೇಳಿದ್ದಾರೆ. ಇದು ತಮಗೂ ಕೂಡ ಗೊತ್ತಿದೆ. ಆದರೆ, ಅದು ಕ್ಯಾನಿನೆಟ್ ಸಬ್ ಕಮಿಟಿ ವತಿಯಿಂದ ಕ್ಯಾಬಿನೆಟ್ ಹೋಗಿ ಅಲ್ಲಿ ಇದರ ಮೇಲೆ ಒಂದು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ಒಂದು ನೋಟ್‌ನ್ನು ತಯಾರು ಮಾಡಿ ಎಂದು ನಾನು ಈಗಾಗಲೇ ಡೆವಲಪ್‌ಮೆಂಟ್ ಕಮಿಷನರ್‌ರವರಿಗೆ ಹೇಳಿದ್ದೇನೆ. ಆ ನೋಟ್‌ನ್ನು ಸಬ್‌ಮಿಟ್ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳತಕ್ಕಂಥದ್ದನ್ನು ನಾವು ಮಾಡುತ್ತೇವೆ. ಏಕೆಂದರೆ, ಇದನ್ನು ಕಾನೂನು ಇಲಾಖೆಯವರು ಪರಿಶೀಲನೆ ಮಾಡಬೇಕಾಗುತ್ತದೆ. ಇದಕ್ಕೆ ಸಣ್ಣ ನೀರಾವರಿ ಇಲಾಖೆಯವರು ಒಪ್ಪಿಗೆ ಕೊಟ್ಟರೂ ಕೂಡ ಇದಕ್ಕೆ ಕಾನೂನಿನ ಅಡೆತಡೆ ಏನಿವೆ ಎನ್ನತಕ್ಕಂಥದ್ದನ್ನು ನೋಡಿ ಆನಂತರ ನಾವು ಕ್ಯಾಬಿನೆಟ್ ಮುಂದಿಡಬೇಕಾಗುತ್ತದೆ. ಏಕೆಂದರೆ ನಾಳೆದಿವಸ ಯಾವುದೇ ರೀತಿಯ ಸಮಸ್ಯೆ ಬರಬಾರದು. ಏಕೆಂದರೆ ಅಚ್ಚುಕಟ್ಟು ಪ್ರದೇಶದ ಕೆಳಗೆ ಇರತಕ್ಕಂಥವರಿಗೆ ನಾಳೆದಿವಸ ಯಾವುದೇ ರೀತಿಯ ಕಾಂಪ್ಲಿಕೇಶನ್ ಕ್ರಿಯೇಟ್ ಮಾಡುವಂತೆ ಆಗಬಾರದು. ಈ ಒಂದು ದೃಷ್ಟಿಯಿಂದ ಇದನ್ನು ಕಾನೂನು ಅಡಿಯಲ್ಲಿ ಪರಿಶೀಲನೆ ಮಾಡಿ ತೂಬುಗಳನ್ನು ಮುಚ್ಚಿ ಅಂತರ್ಜಲ ಹೆಚ್ಚಿಸುವುದಕ್ಕೆ ಯಾವ ರೀತಿಯಾದ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಕ್ಯಾಬಿನೆಟ್ ಮುಂದಿಟ್ಟು ಅಲ್ಲಿ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಳ್ಳಲಾಗುತ್ತದೆ. ನಾನು ಈಗಾಗಲೇ ಹೇಳಿದ ಹಾಗೆ ಇದಕ್ಕೆ ಸಂಬಂಧಪಟ್ಟಂತೆ ಒಂದು ನೋಟ್ ತಯಾರು ಆಗುತ್ತಿದೆ. ಮುಂದಿನ ಕ್ಯಾಬಿನೆಟ್‌ನಲ್ಲಿ ಇದು ಬರುತ್ತದೆ.

ಅಧ್ಯಕ್ಷರು: ಈ ವಿಚಾರ ಪರಿಶೀಲನೆಯಲ್ಲಿದೆ ಎಂದು ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದ್ದರಿಂದ, ಈ ವಿಷಯವನ್ನು ಇಲ್ಲಿಗೆ ಬಿಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಈ ವಿಚಾರವನ್ನು ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುತ್ತೇನೆ ಎಂದಾಗ ಸರ್ಕಾರ ಇಷ್ಟು ಬೇಗ ಮಾಡಿರತಕ್ಕಂಥದ್ದನ್ನು ನೋಡಿದರೆ ಸರ್ಕಾರ ಟ್ರಾನ್ಸ್‌ಫೆರನ್ಸಿಯಿಂದ ಇರತಕ್ಕಂಥದ್ದು ನಮಗೆ ನಿಜವಾಗಿಯೂ ಕೂಡ ಸಂತೋಷ ತರುತ್ತದೆ.

ಅಧ್ಯಕ್ಷರು: ನೀವೊಬ್ಬರೇ ಹೇಳಿರುವುದಲ್ಲ. ನಾವೂ ಕೂಡ ಈಗಾಗಲೇ ಸಾಕಷ್ಟು ಸಲ ಹೇಳಿದ್ದೇವೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಇದಕ್ಕೆ ಸಂಬಂಧಪಟ್ಟಂತೆ ನನ್ನ ಹತ್ತಿರ ಇರತಕ್ಕಂಥ ಮಾಹಿತಿಯನ್ನು ಅವರಿಗೆ ಹೇಳುವುದಕ್ಕಾಗಿ ನನಗೆ ಎರಡು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು: ತಾವೊಬ್ಬರೇ ಹೇಳಿರತಕ್ಕಂಥದ್ದಲ್ಲ. ಇದನ್ನು ನಾವೂ ಕೂಡ ಹೇಳಿದ್ದೇವೆ. ಈ ವಿಚಾರ ಪರಿಶೀಲನೆಯಲ್ಲಿದೆ ಎಂದು ಅವರು ಹೇಳಿದ್ದಾರೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಪರಿಶೀಲನೆಯಲ್ಲಿದ್ದರೂ ಕೂಡ ಇದಕ್ಕೆ ಏನೇನು ಮಾಡುವುದಕ್ಕೆ ಅವಕಾಶ ಇದೆ ಎನ್ನತಕ್ಕಂಥದ್ದನ್ನು ಹೇಳುವುದಕ್ಕೆ ನನಗೆ ಅವಕಾಶ ಕೊಡಬೇಕು.

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟಂತೆ ಒಂದು ನಿರ್ಣಯವನ್ನು ತರುತ್ತೇವೆಂದು ಹೇಳಿದ್ದಾರೆ. ಆ ಸಂದರ್ಭದಲ್ಲಿ ತಾವು ಮಾತನಾಡಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಆವತ್ತು ನಾನು ಬಿಲ್ ಮೇಲೆ ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು: ಬಿಲ್ ಮೇಲೆ ಅಲ್ಲ. ಅವರು ನಿರ್ಣಯದ ಮೇಲೆ ತರುತ್ತಾರೆಯೋ ಅಥವಾ ಶಾಸನದ ಮೂಲಕ ತರುತ್ತಾರೆ ಎನ್ನತಕ್ಕಂಥದ್ದು ಇನ್ನು ಗೊತ್ತಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಅದರ ಮೇಲೆ ಬೆಳಕು ಚೆಲ್ಲುವಂತ ನಾಲ್ಕೈದು ವಿಷಯಗಳು ನನ್ನ ಹತ್ತಿರ ಇದೆ. ಅವರು ತಯಾರು ಮಾಡತಕ್ಕಂಥ ನೋಟ್ ಕ್ಯಾಬಿನೆಟ್‌ಗೆ ಹೋಗುತ್ತದೆ ಎಂದು ಹೇಳಿದರು. ನಾನು ಹೇಳತಕ್ಕಂಥ ವಿಷಯ ಅವರ ನೋಟ್‌ಗೆ ಸೇರಿಸಿಕೊಳ್ಳುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ನಾನು ಮಾತನಾಡುವುದಕ್ಕೆ ಎರಡು ನಿಮಿಷ ಅವಕಾಶ ಕೊಡಿ. ಕೋಲಾರ ಜಿಲ್ಲೆಯಲ್ಲಿ ಏನಾಗಿದೆ ಎನ್ನತಕ್ಕಂಥದ್ದು ತಮಗೂ ಕೂಡ ಗೊತ್ತಿದೆ.

ಅಧ್ಯಕ್ಷರು: ನನಗೆ ಕೋಲಾರ ಜಿಲ್ಲೆ ಒಂದೇ ಅಲ್ಲ. ನನಗೆ ಎಲ್ಲಾ ಜಿಲ್ಲೆಯೂ ಒಂದೇ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ತಾವು ಅಲ್ಲಿಂದ ಬಂದಿರತಕ್ಕಂಥ ಶಾಸಕರಾಗಿರುವುದರಿಂದ ಕೋಲಾರ ಜಿಲ್ಲೆಯಲ್ಲಿ ನಾವು ಅನುಭವಿಸುತ್ತಿರುವ ಕಷ್ಟವನ್ನು ಸರ್ಕಾರದ ಗಮನಕ್ಕೆ ತಂದಿದ್ದರೂ ಕೂಡ ಅದರ ಮೇಲೆ ಬೆಳಕು ಚೆಲ್ಲುವುದಕ್ಕೆ ಏನೇನು ಮಾಡುವುದಕ್ಕೆ ಅವಕಾಶ ಇದೇ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಅಧ್ಯಕ್ಷರು: ಒಂದು ನಿಮಿಷದಲ್ಲಿ ಮಾತನಾಡಿ ಮುಗಿಸಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಒಂದು ನಿಮಿಷವಾಗಿದೆ. ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ ಹಾಗೂ ತುಮಕೂರು, ಚಿತ್ರದುರ್ಗ ಈ ನಾಲ್ಕು ಜಿಲ್ಲೆಗಳಲ್ಲಿ ಕುಡಿಯುವ ನೀರಿಗೆ ಬಹಳ ಕಷ್ಟದ ಪರಿಸ್ಥಿತಿ ಇದೆ. ಇವತ್ತು ಕೋಲಾರ ಜಿಲ್ಲೆಯಲ್ಲಿ ಸುಮಾರು 4600 ಕೆರೆಗಳಿವೆ. ಈ ಸರ್ಕಾರ ಅಧಿಕಾರಕ್ಕೆ ಬಂದ ತಕ್ಷಣವೇ ಕಾಯಕ ಕೆರೆ ಮತ್ತು ಜಲಸಂರಕ್ಷಣೆ ಯೋಜನೆಯನ್ನು ಜಾರಿಗೆ ತಂದು 2600 ಕೆರೆಗಳ ಹೂಳೆತ್ತುವ ಕೆಲಸ ಮಾಡುತ್ತೇವೆಂದು ಹೇಳಿದರು. ಈ ರೀತಿಯ ಘೋಷಣೆ ಕೂಗುತ್ತಾ ನಾಲ್ಕನೇ ವರ್ಷ ಬಂದಿದ್ದಾರೆ. ಇನ್ನು ಒಂದು ವರ್ಷದಲ್ಲಿ ಚುನಾವಣೆ ಬರುತ್ತಿದೆ. 2600 ಕೆರೆಗಳ ಹೂಳನ್ನು ಎತ್ತುತ್ತೇವೆಂದು ಮಾನ್ಯ ಮುಖ್ಯಮಂತ್ರಿಯವರು ಆ ಸಂದರ್ಭದಲ್ಲಿ ಒತ್ತಿ ಒತ್ತಿ ಹೇಳುತ್ತಿದ್ದರು. ನಮ್ಮೆಲ್ಲಾ ಕೆರೆಗಳ ಹೂಳು ಎತ್ತಿದ್ದೇವೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿದ್ದರು. ಆದರೆ, ಇವತ್ತಿನ ದಿವಸ ಕಾಯಕ ಕೆರೆ ಯೋಜನೆಯಡಿಯಲ್ಲಿಯೂ ಕೂಡ ಕೆರೆಗಳ ಹೂಳು ಎತ್ತಿಲ್ಲ. ನನ್ನ ಕ್ಷೇತ್ರದಲ್ಲಿ ಸುಮಾರು 205 ಹಳ್ಳಿಗಳಿವೆ. ಹಾಗೆಯೇ ಸುಮಾರು 200 ಕೆರೆಗಳಿವೆ. ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಕೆರೆಗೆ ಕಟ್ಟನ್ನು ಸ್ಟೆಂಗ್ತನ್ ಮಾಡಿದ್ದಾರೆ.

(ಮಾನ್ಯ ಉಪಾಧ್ಯಕ್ಷರು (ಶ್ರೀ ಮನೋಹರ ಹೆಚ್. ತಹಶೀಲ್ದಾರ್‌ರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಇದನ್ನು ನೀವು ಏಕೆ ಬರೀ ಭಾಷಣಗಳಲ್ಲಿ ಮತ್ತು ಎಲ್ಲಿ ನೋಡಿದರೂ ಕೂಡ ಪತ್ರಿಕೆಗಳಲ್ಲಿ ಮಾತನಾಡುವುದನ್ನು ಬಿಟ್ಟರೆ, ಸಣ್ಣ ನೀರಾವರಿಯಲ್ಲಿ ಕೆಲಸ ಮಾತ್ರ ಏನೂ ಆಗಿರುವುದಿಲ್ಲ. ಮಾನ್ಯ ಖರ್ಗೆಯವರು ಬಂದ ಮೇಲೆ ನನಗಂತೂ ಬಹಳ ಸಂತೋಷವಾಯಿತು. ಮಾನ್ಯ ಖರ್ಗೆಯವರು ಸಣ್ಣ ನೀರಾವರಿ ಮಂತ್ರಿಗಳು ಬಹಳ ಪವರ್‌ಫುಲ್, ಮುಖ್ಯಮಂತ್ರಿಗಳು ಆಗುವಂಥ ಸ್ಟೇಟಸ್

ಇರುವಂಥವರು ನಮಗೆ ಬಹಳ ಅನುಕೂಲವಾಗುತ್ತದೆ ಎಂದು ನಾವು ಆಸೆಯನ್ನು ಕೂಡ ಪಟ್ಟಿದ್ದೆವು. ಆದರೆ ಇವರು ಬಂದಮೇಲೆ ಕೂಡ ನಮಗೆ ಏನೂ ಆಗಲಿಲ್ಲ. ಇವತ್ತು ಕುಡಿಯುವ ನೀರಿಗೆ ಕೋಟ್ಯಾಂತರ ರೂಪಾಯಿ ಖರ್ಚಾಗುತ್ತಿದೆ. ಎಷ್ಟೋ ಜಾಗದಲ್ಲಿ ಕೊಳವೆ ಬಾವಿ ಡ್ರಿಲ್ಲಿಂಗ್ ಮಾಡುವವರಿಗೂ ಕೂಡ ದುಡ್ಡನ್ನು ಕೊಟ್ಟಿರುವುದಿಲ್ಲ. ನಮ್ಮ ಮಾನ್ಯ ಜಿಲ್ಲಾ ಮಂತ್ರಿಗಳು ಮುನಿಯಪ್ಪನವರಿದ್ದಾರೆ. ಡ್ರಿಲ್ಲಿಂಗ್ ಮಾಡುವವರಿಗೆ ನನ್ನ ಕ್ಷೇತ್ರ ಹಾಗೂ ಇನ್ನು ಮೂರು ಕ್ಷೇತ್ರಕ್ಕೆ ಸರ್ಕಾರ ದುಡ್ಡನ್ನು ಕೊಟ್ಟಿರುವುದಿಲ್ಲ. ಅವರನ್ನು ಕೇಳಿದರೆ ಡೀಸೆಲ್ ದುಡ್ಡು ಇಲ್ಲವೆಂದು ಹೇಳುತ್ತಾರೆ. ನಾನು ನಿಮ್ಮಲ್ಲೂ ಡೀಸೆಲ್‌ಗೆ ದುಡ್ಡು ಇಲ್ಲವೆಂದು ನಮ್ಮ ಜಿಲ್ಲಾ ಮಂತ್ರಿಗಳಿಗೆ ಹೇಳಿದರೆ, ನಮ್ಮಲ್ಲಿ ದುಡ್ಡು ಸಫಿಶಿಯೆಂಟಾಗಿ ಇದೆ ಎಂದು ಹೇಳಿದರು. ಮಾನ್ಯ ಮಂತ್ರಿಗಳು ತಾವು ಆಮೇಲೆ ಮಾತನಾಡಿ. ನಾನು ಈಲ್ಡ್ ಆಗಿರುವುದಿಲ್ಲ.

(ಗೊಂದಲ)

ಜೀರೋ ಅವರ್ ಇದು ತಾವು ಬೇಕಾದರೆ ಆಮೇಲೆ ಮಾತನಾಡಿ. ಇವತ್ತು ಈ ಪರಿಸ್ಥಿತಿ ನಮ್ಮ ಜಿಲ್ಲೆಯಲ್ಲಿ ಅದರಲ್ಲೂ ನನ್ನ ಕ್ಷೇತ್ರದಲ್ಲಿ ಉಲ್ಬಣಿಸಿದೆ. ನೀವು ಕೆರೆಗಳ ಹೂಳೆತ್ತುವುದು ಬರೀ ಸ್ವಪ್ನ. ಆದ್ದರಿಂದ ನನ್ನ ಸಲಹೆ ಏನೆಂದರೆ, ಎಲ್ಲಾ ಕೆರೆಗಳ ತೂಬುಗಳನ್ನು ದಯವಿಟ್ಟು ಮುಚ್ಚುವುದು. ಇವತ್ತು ನೀವು ಮುಚ್ಚಬೇಕಾದರೆ, ಇದರ ಜೊತೆಗೆ ನಾವು ಅನೇಕ ವಿಷಯಗಳಲ್ಲಿ, ಕೆರೆಗಳ ಹಿಂದಿರುವ ಗೋಮಾಳ ಜಮೀನನ್ನು ಉತ್ತುಕೊಂಡು ಬಿಟ್ಟಿದ್ದೇವೆ. ಅಕ್ರಮ-ಸಕ್ರಮ ನಮ್ಮ ಕೈಯಿಂದ ಮಾಡಿಸಿಬಿಟ್ಟರು. ಇವತ್ತು ಅಲ್ಲಿ ಬರುವಂಥ ಸಿಲ್ಟ್ – ದಿನೇ ದಿನೇ ಜಾಸ್ತಿಯಾಗುತ್ತಿದೆ ಏನಹ ಕಡಿಮೆಯಾಗುತ್ತಿಲ್ಲ. ಇವತ್ತು ಈ ಪರಿಸ್ಥಿತಿಯಲ್ಲಿ ನಮ್ಮಲ್ಲಿ ವ್ಯವಸಾಯಕ್ಕೆ ನೀವು ಬರೀ ನೀರನ್ನು ಹಾಯಿಸಿ ಆಲೂಗಡ್ಡೆಯನ್ನು ಬೆಳೆಯಿರಿ, ರಾಗಿ ಬೆಳೆಯಿರಿ ಎಂದು ಹೇಳಿದರೆ ನಾವು ಇವತ್ತು ಬಹಳ ಕಷ್ಟದಲ್ಲಿ ಬಂದು ಬಿಟ್ಟಿದ್ದೇವೆ. ಅದಕ್ಕಾಗಿ ಸರ್ಕಾರ ನಮಗೆ ಡ್ರಿಪ್ ಇರಿಗೇಶನ್ ಮತ್ತು ಸ್ಪ್ರಿಂಕ್ಲರ್‌ದಿಂದ ನೀರನ್ನು ಬೆಳೆಗಳಿಗೆ ಸಿಂಪಡಿಸಲು 100 ಪರ್ಸೆಂಟ್ ಸಬ್ಸಿಡಿ ಕೊಡುವಂಥ ಕೆಲಸ ಸರ್ಕಾರ ಮಾಡಬೇಕು. ಮಾನ್ಯ ಕಾಗೋಡು ತಿಮ್ಮಪ್ಪನವರು ನಗುತ್ತಿದ್ದಾರೆ, ಏಕೆಂದರೆ ಅವರ ಭಾಗದಲ್ಲಿ ಮಳೆ ಚೆನ್ನಾಗಿ ಬೀಳುತ್ತಿದೆ. ನಮಗೆ ಅದರ ಅರ್ಥ ಮಳೆಯನ್ನು ಕಳುಹಿಸಿ, ನಾವು ನಿಮ್ಮನ್ನು ಒಂದು ವರ್ಷ ಮಾತನಾಡಿಸುವುದಿಲ್ಲ. ಬೇಕಾದರೆ ಕೋಲಾರ ಜಿಲ್ಲೆಯವರು ಸರ್ಕಾರವನ್ನು ಕೂಡ ಜ್ಞಾಪಿಸಿಕೊಳ್ಳುವುದಿಲ್ಲ. ಬೇರೆ ಬೇರೆ ಕಡೆ ಸ್ವಲ್ಪವಾದರೂ ಮಳೆಯಾಗಿದೆ, ನಮಗೆ ಮಳೆಯೇ ಆಗಿಲ್ಲ. ನಮ್ಮ ಮಾನ್ಯ ಮುನಿಯಪ್ಪನವರು ಸ್ಟೇಟ್‌ಮೆಂಟ್‌ಗಳನ್ನು ಬಹಳ ಹೈಕ್ಲಾಸ್ ಆಗಿ ಕೊಡುತ್ತಿರುತ್ತಾರೆ, ಯಾರಾದರೂ ನೋಡಿದರೆ ಎಷ್ಟು ಕೋಟಿ ರೂಪಾಯಿಗಳು ಇದೆಯಪ್ಪಾ ಕೋಲಾರದಲ್ಲಿ ಅನ್ನಬೇಕು, ನೋಡಿದರೆ ಅಲ್ಲಿ ದುಡ್ಡೇ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ನೀವು ಹಾಗೆ ಬುಡಬುಡಿಕೆ ಹಾಯಿಸಿಕೊಂಡುಬಂದು ಬಿಟ್ಟಿರಾ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ನಾನು ಬುಡಬುಡಿಕೆ ಹಾಯಿಸುತ್ತಿಲ್ಲ, ಬುಡಬುಡಿಕೆ ನಿಮ್ಮ ಪಕ್ಕದಲ್ಲಿರೋ ಮಾನ್ಯ ಮಂತ್ರಿಗಳು ಹಾಯಿಸುವುದು ನಾನ ಏಕೆ ಹಾಯಿಸಲಿ, ನಾನೇನು ಸರ್ಕಾರ, ಅಲ್ಲ. ಬುಡಬುಡಿಕೆ ಹಾಯಿಸಿದರೆ ಜನ ನನ್ನನ್ನು ಓಲ್ಕೆಸುತ್ತಾರೆ ಎಂದು. ನಾನು ಇರುವ ಸತ್ಯಾಂಶವನ್ನು ಈ ಮನೆಯಲ್ಲಿ ಹೇಳುತ್ತಿದ್ದೇನೆ. ನೀವು ಬುಡಬುಡಿಕೆ ಭಾರಿಸಿ ಬರೀ ಇಮೇಜ್‌ನ್ನು ಡೆವಲಪ್‌ಮೆಂಟ್ ಮಾಡುತ್ತಿದ್ದೀರೇ ವಿನಹ ನೀವು ಸಣ್ಣ ನೀರಾವರಿಗೆ ಏನು ಮಾಡಬೇಕು ಅದನ್ನು ಮಾಡಿರುವುದಿಲ್ಲ. ಆದ್ದರಿಂದ ನನ್ನ ಕಳಕಳಿಯ ಪ್ರಾರ್ಥನೆ ಸರ್ಕಾರಕ್ಕೆ

ಏನೆಂದರೆ, ಕೆರೆಗಳ ಹೂಳನ್ನು ಎತ್ತುವುದಕ್ಕೆ ನಿಮ್ಮಿಂದ ಸಾಧ್ಯವಿಲ್ಲ. ಇದನ್ನು ಬೇಕಾದರೆ ಒತ್ತಿ ಒತ್ತಿ ಹೇಳುತ್ತೇನೆ, ಸುಮ್ಮನೆ ಈ ಸ್ಲೋಗನ್‌ಗಳನ್ನು ಬಿಟ್ಟುಬಿಟ್ಟು ಪತ್ರಿಕೆಗಳಲ್ಲಿ ನಾವು ಜಲಸಂರಕ್ಷಣೆ, ರೈತ ಕಾಯಕ ಕೆರೆ ಅದಕ್ಕೆ ಆಮೇಲೆ ಸೊಸೈಟಿಗಳನ್ನು ಮಾಡಿದಿರಿ. ಇದ್ಯಾವುದರಲ್ಲಿ ಕೂಡ ಒಂದು ರೂಪಾಯಿಯ ಕೆಲಸವಾಗಿರುವುದಿಲ್ಲ. ಆದ್ದರಿಂದ ನನ್ನ ಪ್ರಾರ್ಥನೆ ಸ್ವಾಮಿ, ತೂಬುಗಳನ್ನು ಮುಚ್ಚಬೇಕು, ಈ ನಾಲ್ಕೈದು ಜಿಲ್ಲೆಗಳಿಗೆ 100 ಪರ್ಸೆಂಟ್ ಸಬ್ಸಿಡಿಯಲ್ಲಿ ಡ್ರಿಪ್ ಇರಿಗೇಶನ್, ಸ್ಪ್ರಿಂಕ್ಲರ್‌ಗಳಿಗೆ ನೀವು ಹಣವನ್ನು ಕೊಟ್ಟು ಈ ನೀರಿನ ಅಂಡರ್‌ಗ್ರೌಂಡ್ ವಾಟರನ್ನು ಮೇಲೆ ತರಬೇಕೆಂದು ಹೇಳುತ್ತೇನೆ. ಮಳೆ ನೀರಿನ ಸಂಗ್ರಹಕ್ಕೂ ಕೂಡ ಇತ್ತೀಚೆಗೆ ಹೊಸ ಹೊಸ ಮೆಥಡ್‌ಗಳು ಬಂದಿವೆ. ನಾನು ಗುಜರಾತ್‌ಗೆ ಹೋಗಿದ್ದೆ, ಅಲ್ಲಿ ಕೆರೆಗಳಲ್ಲಿ ಬೋರ್‌ವೆಲ್‌ಗಳನ್ನು ಹಾಕಿ ಅದರಲ್ಲಿ ಕೇಸಿಂಗ್ ಪೈಪನ್ನು ಹಾಕಿ ಅಲ್ಲಿಂದ ಬರುವಂಥ ನೀರನ್ನು ಸಕ್ ಮಾಡಿ ಒಳಗಡೆ ಬೋರ್‌ವೆಲ್‌ಗೆ ಹೋಗಿ ಅಂಡರ್‌ಗ್ರೌಂಡ್ ವಾಟರ್ ಅಲ್ಲಿ ಬಹಳ ಚೆನ್ನಾಗಿ ಬರುತ್ತಿದೆ. ಅದಕ್ಕೂ ಕೂಡ ಕೋಲಾರ ಜಿಲ್ಲೆ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆ, ತುಮಕೂರು, ಚಿತ್ರದುರ್ಗ ಈ ಜಲ್ಲೆಗಳಲ್ಲಿ ನೀವು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆಂಧ್ರಪ್ರದೇಶದಲ್ಲಿ ತೂಬುಗಳನ್ನು ಮುಚ್ಚಿಬಿಟ್ಟು ಆ ಕೆಳಗಡೆ ಇರುವಂಥ ರೈತರಿಗೆ 50 ಪರ್ಸೆಂಟ್ ಸಬ್ಸಿಡಿ ಹಣವನ್ನು ಬಾವಿಯನ್ನು ತೋಡುವುದಕ್ಕೆ ದುಡ್ಡನ್ನು ಕೊಡುತ್ತಿದ್ದಾರೆ. ನೀವೂ ಕೊಡಿ, ತಪ್ಪೇನಿದೆ. ನೀವು ಪಾಪ ರೈತರಿಗೆ ದುಡ್ಡು ಕೊಡುವುದು, 50 ಪರ್ಸೆಂಟ್ ಹಣವನ್ನು ಕೊಟ್ಟರೆ ಅವರು ಬಾವಿಯನ್ನೋ ಅಥವಾ ಬೋರ್‌ವೆಲ್‌ನ್ನೋ ಹಾಕಿಕೊಂಡು ಅವರೂ ಕೂಡ ಚೆನ್ನಾಗಿ ಆಗುತ್ತಾರೆ. ಇಲ್ಲಿ ಬೋರ್‌ವೆಲ್‌ಗಳಲ್ಲಿ ಚಾರ್ಜ್ ಆಗುತ್ತದೆ, ನೀವು ಬೇಕಾದರೆ ಕುಡಿಯುವ ನೀರಿಗೆ ಕೊಡುವ ದುಡ್ಡನ್ನು ಉಳಿಸಬಹುದು. ನಮಗೆ ಮುಂದಿನ ತಿಂಗಳಿನಿಂದ ಮಳೆ ಆಗುವ ಅವಕಾಶಗಳಿವೆ. ಆಂಧ್ರಪ್ರದೇಶ ಮತ್ತು ತಮಿಳುನಾಡಿನಿಂದ ನಮಗೆ ಸೈಕ್ಲೋನ್ಸ್ ಬಂದರೆ ಕೋಲಾರ ಹಾಗೂ ಬೆಂಗಳೂರು ಗ್ರಾಮಾಂತರದಲ್ಲಿ ಮಳೆ ಜಾಸ್ತಿಯಾಗುತ್ತದೆ. ಅಷ್ಟರೊಳಗಾಗಿ ಈ ಆರ್ಡರ್ ಬಂದು, ರೈತರನ್ನೂ ಕೂಡ ಒಪ್ಪಿಸುವುದಾಗಬೇಕು. ಈಗ ಬಹಳಷ್ಟು ರೈತರು ಕೂಡ ಮುಂದೆ ಬಂದು ಇದು ಒಳ್ಳೆಯ ಸಲಹೆ ಇದನ್ನು ಮಾಡಬೇಕೆಂದು ಕೂಡ ಕಳೆದ ಎರಡು ವರ್ಷದಲ್ಲಿ ಮಳೆ ಬಿದ್ದಾಗ ನಮ್ಮ ಜಿಲ್ಲಾ ಮಂತ್ರಿಗಳು ಒಂದು ಮೀಟಿಂಗ್‌ನ್ನು ಕರೆದರು. ನನ್ನನ್ನು ಕರೆದರು, ನನಗೆ ಬಹಳ ಖುಷಿಯಾಯಿತು, ಏನು ಒಳ್ಳೆಯ ಕೆಲಸವನ್ನು ಮಾಡುತ್ತಾರೆಂದು. ಅವರನ್ನು ಒಪ್ಪಿಸಿದ ಮೇಲೆ ಪೇಪರ್‌ನಲ್ಲಿ ಒಂದು ಸ್ಟೇಟ್‌ಮೆಂಟ್ ಬಂತು, ಅದನ್ನು ನೋಡಿ ಇವರು ಕೂಡ ಹೆದರಿಕೊಂಡು ಬಂದು ಬಿಟ್ಟರು. ನಾನು ಮಾನ್ಯ ಬೈರೇಗೌಡರು, ಅಗ್ರಿಕಲ್ಚರ್ ಮಿನಿಸ್ಟರ್ ಆಗಿದ್ದಾಗ, ಆವತ್ತೂ ಕೂಡ ಈ ತೂಬುಗಳನ್ನು ಮುಚ್ಚಬೇಕೆಂದು ಹೇಳಿರುತ್ತೇನೆ. ಅವರು ಚುನಾವಣೆ ಬಂದಿರುವುದರಿಂದ ಅದನ್ನು ಮಾಡುವುದಕ್ಕಾಗಲಿಲ್ಲವೆಂದು ಹೇಳಿದರು. ಸ್ವಾಮಿ, ನಾವು ಬದುಕಬೇಕು, ಚುನಾವಣೆಗಳು ಬರುತ್ತವೆ, ಹೋಗುತ್ತವೆ. ಏನೇ ಆಗಲಿ, ಜನರು ಬದುಕುವುದಕ್ಕಾಗಿ ನೀವು ದೃಢವಾದ ಸಂಕಲ್ಪ ಮಾಡಿ ತೀರ್ಮಾನವನ್ನು ಮಾಡಬೇಕು ಎಂದು ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿ, ಚುನಾವಣೆಗಳನ್ನು ತಲೆಯಲ್ಲಿಟ್ಟುಕೊಂಡು ದಯವಿಟ್ಟು ನಮ್ಮನ್ನು ಹಾಳು ಮಾಡಬೇಡಿ.

ಶ್ರೀ ಕಾಗೋಡು ತಿಮ್ಮಪ್ಪ: ಮಾನ್ಯ ಉಪಾಧ್ಯಕ್ಷರೆ, ಇಬ್ಬರೂ ಈ ವರ್ಷ ಚುನಾವಣೆಗೆ ನಿಲ್ಲುವುದಿಲ್ಲ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಜನ ಬೇಡವೆಂದರೆ ನಾವು ನಿಲ್ಲುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಜನ ಅಲ್ಲಾರೀ, ನೀವು ಹೇಳಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಜನ ಬೇಡವೆಂದರೆ ನಾವು ನಿಲ್ಲುವುದಿಲ್ಲವೆಂದು ಹೇಳುತ್ತಿದ್ದೆನಲ್ಲಾ.

ಶ್ರೀ ಕಾಗೋಡು ತಿಮ್ಮಪ್ಪ: ಜನ ಬೇಡವೆಂದು ಹೇಳುತ್ತಾರೆಯೇ? ನೀವು ಈಗ ಮಾಡುವುದು ಚುನಾವಣೆಯ ಕೆಲಸವಲ್ಲವೇ?

ಶ್ರೀ ಡಿ.ಬಿ. ಚಂದ್ರೇಗೌಡ: ಜನ ಬೇಕು ಬೇಡ ಎನ್ನುವುದು ಆಮೇಲೆ, ಮೊದಲು ನಿರ್ಧಾರ ಮಾಡುವವರು ನೀವು ಅಲ್ಲವೆ? ಇವರು ಸುಮ್ಮನೆ ಹೋಗಿ ನಿಲ್ಲುತ್ತಾರೆಯೇ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ಹೇಳುವುದು, ಚುನಾವಣೆಗೆ ನೀವೂ ನಿಲ್ಲುವುದು ಬೇಡ, ನಾವು ನಿಲ್ಲುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ: ಇದು ಚುನಾವಣೆಯ ತಯಾರಿ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ನೋಡಿ ಮತ್ತೆ ನಾವು ಅಲ್ಲಿಗೇ ಹೋಗುತ್ತಿದ್ದೇವೆ. ನೋಡಿ ಗ್ರಹಚಾರ, ನಮ್ಮ ತಲೆಯಲ್ಲಿ ಚುನಾವಣೆ ಚಿಂತನೆ ಬಿಟ್ಟರೆ ಬೇರೆ ಏನೂ ಇಲ್ಲ. ಚುನಾವಣೆಗೆ ನಾವು ಹೇಗೆ ಹೋಗುತ್ತೇವೆ, ಇವತ್ತು ಜನ ಸಾಯುತ್ತಿದ್ದಾರೆ. ಕುಡಿಯುವುದಕ್ಕೆ ನೀರಿನ ತೊಂದರೆ ಇದೆ, ದನಕರುಗಳಿಗೆ ಮೇವು ಇಲ್ಲ. ದನಕರುಗಳಿಗೆ ಕುಡಿಯುವುದಕ್ಕೆ ನೀರು ಇಲ್ಲ. ಇವೆಲ್ಲಾ ಹಿನ್ನಲೆ ಇದ್ದರೂ ಕೂಡ ನಾವು ಈ ತರಹ ಮಾಡುವುದನ್ನು ನಿಲ್ಲಿಸದಿದ್ದರೆ ಇವತ್ತು ಕಷ್ಟವಾಗುತ್ತಿದೆ, ದಯವಿಟ್ಟು ಮುಂದಿನ ಸಾರಿಗೆ ಇವನ್ನು ಮಾಡಬೇಕು ಎನ್ನುವಂಥದ್ದನ್ನು ಹೇಳಿ, ನಿಮಗೆ ಯಾವುದೇ ತರಹದಲ್ಲಿ ಮಾಡುವುದಕ್ಕೆ ಅವಕಾಶವಿದೆ, ದಯವಿಟ್ಟು ಅದನ್ನು ಮಾಡಿಕೊಡಬೇಕೆಂದು ಹೇಳಿ ಉಪಾಧ್ಯಕ್ಷರೆ, ಜೀರೋ ಅವರ್‌ನಲ್ಲಿ ಮಾತನಾಡಲು ನನಗೆ ಅವಕಾಶವನ್ನು ಮಾಡಿಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್: ಮಾನ್ಯ ಉಪಾಧ್ಯಕ್ಷರೆ, ನನ್ನದೊಂದು ಜೀರೋ ಅವರ್‌ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಟೇಟ್‌ಮೆಂಟ್ ಮಾಡುತ್ತೇನೆಂದು ಹೇಳಿದ್ದರು.

ಉಪಾಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಹೇಳಬಹುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಇದು ಮುಗಿಯಿತಾ?

ಉಪಾಧ್ಯಕ್ಷರು: ಮಾನ್ಯ ಶ್ರೀನಿವಾಸಗೌಡರು ಹೇಳುವುದು ಮುಗಿಯಿತು, ತಾವು ಉತ್ತರವನ್ನು ಕೊಡುವುದಿದ್ದರೆ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು): ಮಾನ್ಯ ಉಪಾಧ್ಯಕ್ಷರೆ, ನಾನು ಉತ್ತರವನ್ನು ಹೇಳುತ್ತೇನೆ. ಏಕೆಂದರೆ ಅವರು ಹಿಟ್ ಅಂಡ್ ರನ್ ಮಾಡಿದರೆ ಹೇಗೆ? ಮೋಟಾರ್ ಸೈಕಲ್ ಮೇಲೆ ಹೋಗುತ್ತಾ ಹೊಡೆಯುವುದು ಆಮೇಲೆ ಮುಂದಕ್ಕೆ ಹೋಗುವುದು.

ಶ್ರೀ ಡಿ.ಬಿ. ಚಂದ್ರೇಗೌಡ: ಇಲ್ಲಿ ಸ್ವಲ್ಪ ಬದಲಾವಣೆಯಾಗಿದೆ, ಹಿಟ್ ಅಂಡ್ ಸಿಟ್ ಆಗಿದೆ. ಅದಕ್ಕೆ ಉತ್ತರವನ್ನು ಹೇಳುವುದಕ್ಕೆ ತಾವು ಅವಕಾಶವನ್ನು ಮಾಡಿಕೊಡಬೇಕು. ತಾವು ಅವರಿಗೆ ಅವಕಾಶವನ್ನು ಕೊಡುತ್ತೀರಿ, ನಮಗೆ ಕೊಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ಇವೆಲ್ಲ ಉತ್ತರ ಪುರಷನ ಮಾತುಗಳು, ನಿಮ್ಮ ನಾಯಕರು ಮೊದಲನೆಯ ದಿವಸ ಏನು ಹೇಳಿದರು. ನೀವು ಮರೆತು ಹೋಗಿ ಬಿಡುತ್ತೀರಿ, ನಿಮ್ಮ ನಾಯಕರು ನಾಲ್ಕು ವರ್ಷದಿಂದ ಏನು ಹೇಳಿದರು? ವಿರೋಧ ಪಕ್ಷದವರು ಹಿಟ್ ಅಂಡ್ ರನ್ ಮಾಡುತ್ತಾರೆಂದು ಹೇಳಿದರು. ಈಗ ರನ್ ಮಾಡಿದವರು ನೀವೇ ನಾವಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಉಪಾಧ್ಯಕ್ಷರೆ, ಅದಕ್ಕೆ ಅವರು ಬದಲಾವಣೆ ಮಾಡಿ ಹಿಟ್ ಅಂಡ್ ಸಿಟ್ ಎಂದು ಹೇಳಿದರು. ಮಾನ್ಯ ಶ್ರೀನಿವಾಸಗೌಡರು ಕೆಲವೊಂದು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ ಕೆರೆಗಳ ತೂಬುಗಳನ್ನು ಮುಚ್ಚಿ ಅಂತರ್ಜಲವನ್ನು ಹೆಚ್ಚಿಸತಕ್ಕಂಥದ್ದರ ಬಗ್ಗೆ ಸರಕಾರ ತಕ್ಷಣ ಕ್ರಮವನ್ನು ಜರುಗಿಸಬೇಕು. ಆಂಧ್ರಪ್ರದೇಶದಲ್ಲಿ ಅದನ್ನು ಮಾಡಿದ್ದಾರೆ, ಇಲ್ಲಿಯೂ ಕೂಡ ಅದೇ ರೀತಿಯಾಗಿ ಮಾಡಬೇಕು ಎನ್ನತಕ್ಕಂಥ ಒಳ್ಳೆಯ ಸಲಹೆಯನ್ನು ಅವರು ಕೊಟ್ಟಿದ್ದಾರೆ. ಈಗಾಗಲೇ ಇದರ ಬಗ್ಗೆ ಸರ್ಕಾರ ಅಧ್ಯತೆಯನ್ನು ನೀಡಿ ಸಂಬಂಧಪಟ್ಟ ಡೆವಲಪ್‌ಮೆಂಟ್ ಕಮಿಷನ್‌ರವರಿಗೆ ಒಂದು ನೋಟ್‌ನ್ನು ತಯಾರು ಮಾಡಿ ಸಚಿವ ಸಂಪುಟದ ಮುಂದೆ ತರಬೇಕು, ಅದನ್ನು ಕಾನೂನಿನ ಪ್ರಕಾರ ಎಗ್ಸಾಮಿನ್ ಮಾಡಬೇಕಾಗುತ್ತದೆ. ಏಕೆಂದರೆ ನಾಳೆ ಅಚ್ಚುಕಟ್ಟುದಾರರು ಕೋರ್ಟಿಗೆ ಹೋಗಬಾರದು. ಅದರ ಕೆಳಗಡೆ ಇರುವಂಥವರು ಕೇಳಬಹುದು. ನಮಗೆ ಆಟೊಮ್ಯಾಟಿಕ್ ಆಗಿ ನೀರು ಬರುತ್ತಿತ್ತು, ಬೋರ್‌ವೆಲ್‌ಗೋಸ್ಕರ ಮಾಡುತ್ತಿದ್ದಾರೆ. ಕೆರೆ ನಿರ್ಮಾಣವಾಗಿ ನೂರಾರು ವರ್ಷಗಳಾಗಿದೆ. ಬೇರೆಯವರು ಬೋರ್‌ವೆಲ್ ಹಾಕಿ 5–10 ವರ್ಷಗಳಾಗಿರಬಹುದು. ಅದಕ್ಕಾಗಿ ಹೊಸ ಬೋರ್‌ವೆಲ್‌ದಾರರಿಗೆ, ಅಚ್ಚುಕಟ್ಟುದಾರರಿಗೆ ನೀವು ಅನುಕೂಲ ಮಾಡುವುದಕ್ಕೋಸ್ಕರ ಹಳೆ ಜನರಿಗೆ ನೀವು ತೊಂದರೆ ಕೊಡುತ್ತಿದ್ದೀರಿ ಎನ್ನುವ ಭಾವನೆ ಬರಬಾರದು. ಆ ರೀತಿಯಾಗಿ ಒಂದು ಲೀಗಲ್ ಫೈಟ್ ಆಗಬಾರದೆಂದು ಹೇಳಿ, ನಾವು ಕಾನೂನು ರೀತಿಯಾಗಿ ಯಾವ ರೀತಿಯಾಗಿ ತೂಬನ್ನು ಮುಚ್ಚಬೇಕು, ಅಂತರ್ಜಲ ನೀರು ಒಂದೆರಡು ವರ್ಷದವರೆಗೆ ಹೆಚ್ಚಾಗುವುದಿಲ್ಲ, ಅಥವಾ ಕುಡಿಯುವುದಕ್ಕಾಗಲಿ ಅಥವಾ ಕೆರೆಗಳಲ್ಲಿ ನೀರು ತುಂಬಿ, ಸರಿಯಾಗಿ ಬೋರ್‌ವೆಲ್‌ಗೆ ನೀರು ಬರತಕ್ಕಂಥದ್ದನ್ನು ಹೇಗೆ ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ನಾನು ಈಗಾಗಲೇ ಹೇಳಿರುತ್ತೇನೆ. ಎಗ್ಸಾಮಿನ್ ಮಾಡುತ್ತಿದ್ದೇವೆ, ಅದು ಕ್ಯಾಬಿನೆಟ್ ಮುಂದೆ ಬರುತ್ತದೆ.

1.40 ಪಿ.ಎಂ.

ಆದಷ್ಟು ಬೇಗನೆ ಒಂದು ಕ್ರಮವನ್ನು ಜರುಗಿಸುವಂತಹ ಎಲ್ಲಾ ಪ್ರಯತ್ನಗಳನ್ನು ಮಾಡುತ್ತೇವೆ. ತಾವು ಏನು ಎಕ್ಸ್‌ಪ್ರೆಸ್ ಮಾಡಿದ್ದೀರಿ, ಇದನ್ನು ನಾವು ಕೋಲಾರಕ್ಕೆ ಹೋದಾಗ ಈ ಮಾತನ್ನೇ ಅಲ್ಲಿ ಎಲ್ಲಾ ಸದಸ್ಯರುಗಳು ಹೇಳಿದರು. ತಾವು ಕೂಡ ಇದನ್ನೆ ಪ್ರಸ್ತಾಪ ಮಾಡಿದ್ದೀರಿ, ನಮ್ಮ ಮಾನ್ಯ ಮಂತ್ರಿಗಳಾದ ಮುನಿಯಪ್ಪನವರು ಕೂಡ ಇದೇ ಮಾತನ್ನು ಹೇಳಿದ್ದಾರೆ. ಸಭಾಧ್ಯಕ್ಷರು ಕೂಡ ಪದೇಪದೇ ಇದರ ಬಗ್ಗೆ ಒತ್ತಾಯವನ್ನು ಮಾಡುತ್ತಿದ್ದಾರೆ. ನೀವು ಎಲ್ಲಿ ಮಾಡದೇ ಇದ್ದರೂ ಕೂಡ ಡಾರ್ಕ್ ಮತ್ತು ಗ್ರೇ ಏರಿಯಾದಲ್ಲಿರತಕ್ಕಂತಹ ಕೆರೆಗಳಿಗಾದರೂ ತೂಬು ಮುಚ್ಚಿಸುವ ಬಗ್ಗೆ ನೀವು ಆದೇಶವನ್ನು ಕೊಡಬೇಕೆಂದು ಅವರು ಹೇಳುತ್ತಿದ್ದಾರೆ. ಆದರೆ ನಮ್ಮ ಓರಲ್ ಆದೇಶವಾಗಲಿ, ಎಕ್ಸಿಕ್ಯುಟೀವ್ ಆರ್ಡರ್ಸ್‌ನ್ನು ನಾಳೆಯ ದಿವಸ ಚಾಲೆಂಜ್ ಮಾಡಬಾರದೆಂಬ ದೃಷ್ಟಿಯಿಂದಲೇ ಇದನ್ನು ಸಚಿವಸಂಪುಟದ ಮುಂದೆ ಒಯ್ದು ಇದರ ಬಗ್ಗೆ ಒಂದು ತೀರ್ಮಾನವನ್ನು ತೆಗೆದುಕೊಳ್ಳುವ ಬಗ್ಗೆ ಒಂದು ನಿರ್ಣಯವನ್ನು ಮಾಡಿ ಅದರ ಬಗ್ಗೆ ಚಾಲನೆಯನ್ನು ಕೊಡುತ್ತಿದ್ದೇವೆ. ಎರಡನೆಯದು

ಏನೆಂದರೆ, ನಮ್ಮ ಕೋಲಾರ ಜಿಲ್ಲೆಗೆ ಏನನ್ನೂ ಮಾಡಿಲ್ಲವೆಂದು ಅಥವಾ ಯಾವ ಕಾರ್ಯಕ್ರಮಗಳನ್ನು ಕೂಡ ಇಲ್ಲ, ಕೆರೆಗಳನ್ನು ದುರಸ್ತಿ ಮಾಡತಕ್ಕಂತಹ ಕಾರ್ಯಕ್ರಮಗಳು ಇಲ್ಲವೆನ್ನತಕ್ಕಂತಹ ಮಾತನ್ನು ಮಾನ್ಯ ಸದಸ್ಯರಾದ ಶ್ರೀನಿವಾಸಗೌಡರು ಹೇಳುತ್ತಿದ್ದಾರೆ. ಈ ವಿಶ್ವಬ್ಯಾಂಕಿನ ನೆರವು ಏನು ಬಂತಲ್ಲಾ, ಆ ವಿಶ್ವಬ್ಯಾಂಕಿನ ನೆರವಿನ ಅರ್ಧಭಾಗವನ್ನು ಕೋಲಾರ ಜಿಲ್ಲೆಗೆ ಕೊಟ್ಟಿದ್ದೇವೆ. ಎರಡು ಸಾವಿರ ಕರೆಗಳನ್ನು ದುರಸ್ತಿ ಮಾಡಬೇಕೆಂದು ಸುಮಾರು ಸಾವಿರ ಕೋಟಿ ರೂಪಾಯಿಗಳನ್ನು ಸಾಲವನ್ನು ತೆಗೆದುಕೊಂಡು ಇವತ್ತಿನ ದಿವಸ ಆ ದುರಸ್ತಿ ಕೆಲಸಕ್ಕಾಗಿ ಚಾಲನೆಯನ್ನು ಕೊಟ್ಟಿದ್ದೇವೆ. ಅದರಲ್ಲಿ ಸಾವಿರ ಕೆರೆಗಳನ್ನು ದುರಸ್ತಿ ಮಾಡಿರುವುದು ಕೋಲಾರದಲ್ಲಿಯೇ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರು ಒಂದು ನಿಮಿಷ ಈಲ್ಡ್ ಆದರೆ ಹೇಳುತ್ತೇನೆ. ತಾವು ತಪ್ಪು ಮಾಹಿತಿಯನ್ನು ಕೊಡುತ್ತಿದ್ದೀರಿ. ನಾನು ನನ್ನ ಕ್ಷೇತ್ರದಲ್ಲಿರುವ ಬಗ್ಗೆ ಹೇಳಿದ್ದೇನೆ. ಒಂದೇ ಒಂದು ಕೆರೆಯನ್ನು ಸ್ಟೆಂಗ್ತನ್ ಮಾಡಿಸಿದ್ದು ಅದು ಒಂಭತ್ತುವರೆ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ನೀವು ಏತಕ್ಕಾಗಿ ಒಂದು ಸಾವಿರ ಕೆರೆಗಳಗನ್ನು ಬರೀ ಕೋಲಾರಕ್ಕೆ ಕೊಟ್ಟಿದ್ದೀರೆಂದು ತಪ್ಪು ಮಾಹಿತಿಯನ್ನು ಕೊಡುತ್ತಿದ್ದಿರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಶ್ರೀನಿವಾಸಗೌಡರೇ ನಾನು ಮುಂದೆ ಇದರ ಬಗ್ಗೆ ಹೇಳುತ್ತೇನೆ ಕೇಳಿ. ನೀವು ಸುಮ್ಮನೆ ಗಡಿಬಿಡಿ ಮಾಡಿ ಕುಳಿತುಕೊಂಡಿರಿ. ಸಾವಿರ ಕೆರೆಗಳೆಂದರೆ 5 ವರ್ಷಗಳಲ್ಲಿ ಮಾಡತಕ್ಕಂತಹ ಕಾರ್ಯಕ್ರಮ 5 ವರ್ಷಗಳಲ್ಲಿ ಒಂದು ಸಾವಿರ ಕೆರೆಗಳನ್ನು 650 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ, ಅದರಲ್ಲಿ ನಿಮ್ಮ ಸಾವಿರ ಕೆರೆಗಳು ಇವೆ, ಉಳಿದವು ಎಲ್ಲಾ 6 ಜಿಲ್ಲೆಗಳಲ್ಲಿ ಸೇರಿ ಸಾವಿರ ಕೆರೆ ಇದೆ. ಅಂದರೆ ಇದರ ಬಗ್ಗೆ ನೀವೇ ಲೆಕ್ಕ ಹಾಕಿ ಇದರಲ್ಲಿ ಬಹುಪಾಲು ಯಾರಿಗೆ ಹೋಗುತ್ತಿದೆಯೋ, ಈ ಪ್ರತಿ ಮತಕ್ಷೇತ್ರಕ್ಕೂ ಒಂದೊಂದು ತಾಲ್ಲೂಕಿನಲ್ಲಿ ಕನಿಷ್ಠ ಅಂದರೆ 3 ಕೆರೆಗಳ ದುರಸ್ತಿಯನ್ನು ಪ್ರಾರಂಭ ಮಾಡಿದ್ದಾರೆ, ಎನ್‌ಜಿಒಸ್ ಬಗ್ಗೆ ತಮಗೆ ಗೊತ್ತಿರುವ ಹಾಗೆ ಅದು ಹಿಂದೆ ಆಯಿತು, ನಾನು ಎನ್‌ಜಿಒಸ್ ಬಗ್ಗೆ ಈಗ ಹೇಳುವುದಕ್ಕೆ ಹೋಗುವುದಿಲ್ಲ. ಅದು ಯಾವುದೋ ಕಾರಣದಿಂದ ಎನ್‌ಜಿಒಸ್ ಫಾರ್ಮ ಮಾಡಿ ಆ ಸೊಸೈಟಿಗಳನ್ನು ಮಾಡಿ ಅವರ ಮುಖಾಂತರ ಇವೆಲ್ಲವನ್ನೂ ಕೂಡ ಮಾಡಬೇಕು, ದುರಸ್ಥಿ ಮಾಡಿಸಬೇಕು, ಮತ್ತು ಅಲ್ಲೆಲ್ಲಾ ಅಸೋಸಿಯೇಷನ್ಸ್‌ಗಳನ್ನು ಮಾಡಿಸಬೇಕು ಬೆನಿಫಿಷರಿಸ್‌ಗಳಿಗೆ ಪ್ರೋತ್ಸಾಹ ನೀಡಬೇಕು. ಅದರಲ್ಲಿ ಇನ್‌ವಾಲ್ವ್ ಮಾಡಬೇಕೆನ್ನುವಂತಹ ದೃಷ್ಟಿಯಿಂದ ವರ್ಲ್ಡ್‌ಬ್ಯಾಂಕ್‌ನ ಗೈಡ್‌ಲೈನ್ಸ್ ಪ್ರಕಾರ ಈ ಕೆಲಸವನ್ನು ಮಾಡಲಾಯಿತು. ಇವತ್ತು ಪ್ರತಿ ತಾಲ್ಲೂಕಿನಲ್ಲಿಯೂ ಮೂರು ಮೂರು ಕೆರೆಗಳ ಕೆಲಸ ಇವತ್ತು ನಡೆದಿದೆ, ಈ ರೀತಿಯಾಗಿ ಕೆಲಸಗಳು ನಡೆದಿದ್ದರೂ ಕೂಡ ಅವರು ಇಲ್ಲವೆಂದು ಹೇಳಿದರೆ ಆ ಮಾತು ಬೇರೆ. ನನಗೆ ಇಂದೂ ಸಾಕ್ಷಿ ಇದೆ ಮತ್ತು ಮುಂದೂಸಹ ಸಾಕ್ಷಿಗಳು ಇವೆ, ಆ ಮುಂದಿನ ಸಾಕ್ಷಿ ಏಕೋ ನನಗೆ...

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಹಾಗಲಕಾಯಿಗೆ ಬೇವಿನಕಾಯಿ ಸಾಕ್ಷಿ ಎಂದು ಮಾನ್ಯ ಮುನಿಯಪ್ಪನವರು ಸಾಕ್ಷಿಯನ್ನು ತಾವು ತೆಗೆದುಕೊಳ್ಳುತ್ತಿದ್ದೀರಿ. ನಾವು ಹೇಳುತ್ತಿರುವುದೇನೆಂದರೆ, ನನ್ನ ಕ್ಷೇತ್ರದಲ್ಲಿ ಒಂದೇ ಒಂದು ಕೆರೆ ಅಂತ ನಾನು ಬೇಕಾದರೆ ಪ್ರಮಾಣ ಮಾಡಿ ಹೇಳುತ್ತೇನೆ. ಮೂರು ಆಗಿದೆ ಎಂದು ಹೇಳಿದರೆ ನಾನು ಏತಕ್ಕಾಗಿ ಸುಳ್ಳು ಹೇಳಬೇಕು. 4 ವರ್ಷದಲ್ಲಿ ಒಂದು ಕೆರೆ ಆಗಿದೆ ಎಂದು ಒಪ್ಪಿಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಒಂದು ತಾಲ್ಲೂಕಿನಲ್ಲಿ 3 ಕೆರೆಗಳು ಆಗಿವೆ ಎಂದು ಹೇಳಿದೆ. ಇದು 5 ವರ್ಷದ ಪ್ರೋಗ್ರಾಮ್ ಈಗ ಪ್ರಾರಂಭವಾಗಿದೆ. ಇದು 2 ವರ್ಷಗಳಲ್ಲಿ ಚಾಲನೆ ಇತ್ತೇ? ಕಳೆದ ಎರಡು ವರ್ಷಗಳಲ್ಲಿ ಏನೂ ಆಗಲಿಲ್ಲ. ನಾನು ಬಂದು ಮೀಟಿಂಗ್‌ಗಳನ್ನು ಮಾಡಿ ಕೊನೆಗೆ ಎಲ್ಲರನ್ನೂ ಇನ್‌ವಾಲ್ವ್ ಮಾಡಿ ಈಗ ಆಗಿದ್ದು ಆಗಿದೆ, ಏಕೆಂದರೆ ಅದು ಎಷ್ಟು ಕಾಸ್ಟಿಲಿ ಆಗಬಹುದು ಎಂದು ತಮಗೂ ಗೊತ್ತಿದೆ. ನಮ್ಮ ಇಂಜಿನಿಯರ್‌ಗಳಿಗೆ ಮತ್ತು ಲೋಕಲ್ ಜನರಿಗೆ ಬಿಟ್ಟರೂ ಕೂಡ ಬಹಳ ಸಹಾಯದಲ್ಲಿ ಆ ಕೆರೆಗಳು ದುರಸ್ತಿಯಾಗುತ್ತದೆ. ಆದ್ದರಿಂದ ಇವತ್ತು ಆ ವರ್ಲ್ಡ್‌ಬ್ಯಾಂಕ್ ನಾರ್ಮ್ಸ್, ಆರ್ಕಿಟೆಕ್ಚರ್ಸ್, ಅಡ್ವೈಸರ್ಸ್ ರೀಸರ್ಚ್ ಪೀಪಲ್ ಇವರೆಲ್ಲರೂ ಸೇರಿ 300 ಕೋಟಿ ರೂಪಾಯಿಗಳನ್ನು ಅವರಿಗೆ ಕೊಡಲು ಹಿಂದೆ ಒಪ್ಪಿಕೊಂಡು ಬಿಟ್ಟಿದ್ದರು. ಈಗ ಉಳಿದಿದ್ದರಲ್ಲಿ ಇವತ್ತು 650 ಕೋಟಿ ರೂಪಾಯಿಗಳು ಬರೀ ಕೆಲಸಕ್ಕಾಗಿ ಇವತ್ತಿನ ದಿವಸ 5 ವರ್ಷಗಳಲ್ಲಿ ಮಾಡಬೇಕು. ಹಂತಹಂತವಾಗಿ ಈ ವರ್ಷ 100 ಕೆರೆಗಳು, ಮುಂದಿನ ವರ್ಷ 300 ಕೆರೆಗಳು ಹೀಗೆ 5 ವರ್ಷಗಳಲ್ಲಿ ಸಾವಿರ ಕೆರೆಗಳನ್ನು ನಿಂಬಲ್ ಮಾಡಬೇಕು. ಉಳಿದ ಕಡೆ ಸಾವಿರ ಕೆರೆಗಳನ್ನು ಮಾಡಬೇಕೆಂಬ ಕಾರ್ಯಕ್ರಮವನ್ನು ಹಾಕಿಕೊಂಡು ಆ ರೀತಿಯಾಗಿ ನಡೆದಿದೆ. ಇನ್ನು ಎರಡನೆಯದಾಗಿ "ರೈತ ಕಾಯಕ ಕೆರೆ" ಬರಗಾಲದಲ್ಲಿ ದುಡ್ಡು ಇಲ್ಲದಿದ್ದರೂ ಕೂಡ ನೀರಾವರಿ ನಿಗಮದಿಂದ ದುಡ್ಡು ತೆಗೆದುಕೊಂಡು ಪ್ರತಿ ಮತ ಕ್ಷೇತ್ರಕ್ಕೂ ಒಂದು ಕೆರೆಯನ್ನಾದರೂ ಮಾಡಬೇಕೆಂದು ಹೇಳಿ ನಾವು ಮಾಡುತ್ತಿದ್ದೇವೆ. ಅದನ್ನು ತಾವು ಮಾಡುತ್ತಿದ್ದೀರಾ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ನೀವು ಹೇಳುವುದೆಲ್ಲಾ ಸೇರಿ ಒಂದೇ ಒಂದು ಕೆರೆ ಆಗಿದೆ. ಈ ಸಭೆಯಲ್ಲಿ ನಾನು ಏತಕ್ಕಾಗಿ ಸುಳ್ಳು ಹೇಳಬೇಕು ಏನೂ ಇಲ್ಲ ಸ್ವಾಮಿ. ಆಗಿದ್ದರೆ ನಿಮ್ಮನ್ನು ಅಪ್ರೀಷಿಯೇಟ್ ಮಾಡುವಂತಹ ಕೆಲಸವನ್ನು ನಾನೇ ಮಾಡುತ್ತಿದ್ದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ರೈತ ಕಾಯಕ ಕೆರೆ ನಿಮ್ಮಲ್ಲಿ ಆಗಿದೆಯೇ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಒಂದು ಕೆರೆಯನ್ನು ಬಿಟ್ಟರೆ ಇನ್ನೇನೂ ಆಗಿರುವುದಿಲ್ಲ. ತಾವು 3 ಕೆರೆಗಳನ್ನು ಹೇಳುತ್ತಿದ್ದೀರಿ, ಶಿಡ್ಲಘಟ್ಟದಲ್ಲಿ ಏನಾದರೂ ಆಗಿದೆಯೋ ಏನೋ ನನಗೆ ಗೊತ್ತಿಲ್ಲ. ನಮ್ಮಲ್ಲಿ ಆಗಿರುವ ಬಗ್ಗೆ ನಿಮಗೆ ಹೇಳುತ್ತಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ವರ್ಲ್ಡ್ ಬ್ಯಾಂಕ್ ಸಹಾಯದಿಂದ ಪ್ರಾರಂಭವಾಗುತ್ತದೆ.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಸಚಿವರು): ಕೋಲಾರ ಜಿಲ್ಲೆಯ ಏಳು ತಾಲ್ಲೂಕಿನಲ್ಲಿ ಪ್ರತಿ ತಾಲ್ಲೂಕಿನಲ್ಲಿಯೂ ಮೂರು ಮೂರು ಕೆರೆಗಳನ್ನು ಪ್ರಥಮ ಹಂತವಾಗಿ ತೆಗೆದುಕೊಂಡು ಈಗಾಗಲೇ ಕೆಲಸಗಳು ಪ್ರಾರಂಭವಾಗಿ ನಡೆಯುತ್ತಿದೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ರಾಜ್ಯದ ಎಲ್ಲಾ ತಾಲ್ಲೂಕಿನ ಬಗ್ಗೆ ಹೇಳಿ ಸ್ವಾಮಿ. ಕೋಲಾರ ಜಿಲ್ಲೆಯದು ಬೇಡ ನಿಮ್ಮ ಹತ್ತಿರ ಬೇರೆ ಮಾಹಿತಿ ಇದ್ದರೆ ಹೇಳಿ. ಏತಕ್ಕಾಗಿ ಇದನ್ನು ಹೇಳುತ್ತಿದ್ದೀರಿ. ಕೆರೆಗಳನ್ನು ಹೊತ್ತುಕೊಂಡು ಬರುವುದಿಲ್ಲ, ನೀವು ಹೋಗುವುದಕ್ಕೆ ಮಾತ್ರ ರೆಡಿ ಇರುತ್ತೀರಿ, ಯಾವಾಗ ನೋಡಿದರೂ ಕೂಡ 100 ಕೋಟಿ ರೂ. 500 ಕೋಟಿ ರೂ. ಎಂದು ಪತ್ರಿಕೆಗಳಲ್ಲಿ ಹೇಳುತ್ತಿರುತ್ತೀರಿ. ಇದನ್ನು ಹೊತ್ತುಕೊಂಡು ಬರುವುದಕ್ಕೆ ಆಗುವುದಿಲ್ಲವೇ? ಇದು ಯಾವ ನ್ಯಾಯ ಸ್ವಾಮಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಿಮ್ಮ ಮತಕ್ಷೇತ್ರದಲ್ಲಿ ಆಗಿದೆಯೋ ಅಥವಾ ಬೈರೇಗೌಡರ ಕ್ಷೇತ್ರದಲ್ಲಿ ಆಗಿದೆಯೋ ಅದರ ಬಗ್ಗೆ ಆಫ್ ಮಾಡಿಸೋಣ. ಇದು ಒಂದು ಕೆಲಸ, ವಿಶ್ವ ಬ್ಯಾಂಕಿನ ಹಣದಿಂದ ನಡೆದಿರುವುದು, ಇದಕ್ಕೆ ಆದ್ಯತೆ ಇಲ್ಲವೆಂದು ತಿಳಿದುಕೊಂಡೇ ಬರಗಾಲದಲ್ಲಿ ನಾವು ಪ್ರತಿ ತಾಲ್ಲೂಕಿಗೆ 20 ಲಕ್ಷ ರೂಪಾಯಿಗಳನ್ನು ಮತ್ತು ಅದರ ಜೊತೆಯಲ್ಲಿ ಫುಡ್‌ಗ್ರೈನ್ಸ್ ಜೋಡಿಸಿ ಸುಮಾರು 50–60 ಲಕ್ಷ ರೂಪಾಯಿಗಳ ಕೆಲಸವನ್ನು ಒಂದೊಂದು ತಾಲ್ಲೂಕಿನಲ್ಲಿ ಕೊಟ್ಟಿದ್ದೇವೆ. ಇಷ್ಟೊಂದು ಹಣವನ್ನು ಕೊಟ್ಟರೂ ಕೂಡ ಏನೂ ಕೊಟ್ಟಿಲ್ಲ, ಏನು ಮಾಡಿಲ್ಲವೆಂದರೆ ನಾನು ವಿಷಾದವನ್ನು ವ್ಯಕ್ತಪಡಿಸಬೇಕಾಗುತ್ತದೆ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ: ಇದು ಸತ್ಯಕ್ಕೆ ದೂರ, 50–60 ಲಕ್ಷ ರೂಪಾಯಿಗಳನ್ನು ಕೊಟ್ಟಿರುವುದು ಸುಳ್ಳು, ಬರ ಪರಿಹಾರದಲ್ಲಿ ಹಣ ಕೊಟ್ಟಿರುವುದನ್ನು ಲೆಕ್ಕಹಾಕುವುದಕ್ಕೆ ಹೋಗಬೇಡಿ. ಇದರಿಂದಾಗಿ ಸಣ್ಣ ನೀರಾವರಿಗೆ ಏನು ಉಪಯೋಗವಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಇದು ನನ್ನ ಹೇಳಿಕೆಯಾಗಿದೆ, ನಾವು ಕೊಟ್ಟಿದ್ದೇವೆ, ಅದರಿಂದ ಸಾಕಷ್ಟು ಕೆಲಸಗಳಾಗಿವೆ, ಎಲ್ಲೆಲ್ಲಿ ತೊಂದರೆ ಇದೆ ಅಲ್ಲಲ್ಲಿ ಸರಿಯಾಗಿ ಉಪಯೋಗ ಮಾಡತಕ್ಕಂಥದ್ದನ್ನು ಮಾಡಿದ್ದೇವೆ. ಆದರೂ ಕೂಡ ಏನೂ ಆಗಿಲ್ಲವೆಂದು ನೀವು ಹೇಳತಕ್ಕಂಥದ್ದು ಸರಿಯಲ್ಲ, ಕೋಲಾರಕ್ಕೆ ವಿಶ್ವಬ್ಯಾಂಕಿನ ನೆರವಿನಲ್ಲಿಯೂ ಕೂಡ ಹೇಳತಕ್ಕಂಥದ್ದು ಸರಿಯಲ್ಲ, ಕೋಲಾರಕ್ಕೆ ವಿಶ್ವಬ್ಯಾಂಕಿನ ನೆರವಿನಲ್ಲಿಯೂ ಕೂಡ ಕೊಟ್ಟಿದ್ದೇವೆ. ರೈತ ಕಾಯಕ ಕೆರೆಯಲ್ಲಿಯೂ ಸಹ ಕೊಟ್ಟಿದ್ದೇವೆ. ಬರಗಾಲದಲ್ಲಿಯೂ ಕೂಡ ಇವತ್ತು ಕೊಟ್ಟಿದ್ದೇವೆ. ಮುಂದೆ ತಾವು ಹೇಳಿದ ಹಾಗೆ ಕೆರೆ ತೂಬನ್ನು ಮುಚ್ಚಿ ನೀರು ನಿಲ್ಲಿಸುವ ಬಗ್ಗೆಯೂ ಕೂಡ ಅದು ಸರ್ಕಾರದ ಯೋಚನೆಯಲ್ಲಿದೆ ಅದನ್ನು ಮಾಡುತ್ತೇವೆ.

ಶ್ರೀ ಶಿವಾನಂದ ಎಸ್. ಪಾಟೀಲ್: ಮಾನ್ಯ ಉಪಾಧ್ಯಕ್ಷರೆ, ಒಂದೇ ಒಂದು ಕ್ಲಾರಿಫಿಕೇಷನ್ ಇದೆ. ಜಲಸರಂವರ್ಧನ ಯೋಜನೆಯಲ್ಲಿ...

ಉಪಾಧ್ಯಕ್ಷರು: ಡಿಸ್‌ಕಷನ್ ಅಲ್ಲ ಇದು,

ಶ್ರೀ ಶಿವಾನಂದ ಎಸ್. ಪಾಟೀಲ್: ಇಲ್ಲಾ, ಇಲ್ಲಾ, ನಾನು ಅವರನ್ನು ರಿಕ್ವೆಸ್ಟ್ ಮಾಡುತ್ತಿದ್ದೇನೆ.

ಉಪಾಧ್ಯಕ್ಷರು: ರೈಸ್ ಮಾಡುವುದು ಅಷ್ಟೇ ಇದು.

ಶ್ರೀ ಶಿವಾನಂದ ಎಸ್. ಪಾಟೀಲ್: ಅಲಿಗೇಷನ್ ಇಲ್ಲ.

ಉಪಾಧ್ಯಕ್ಷರು: ಇದು ಚರ್ಚೆಯಾಗಿದೆ, ಮತ್ತೆ ಏತಕ್ಕಾಗಿ ಅದನ್ನು ತೆಗೆದುಕೊಳ್ಳುತ್ತಿದ್ದೀರಿ?

ಇ) ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ವಿದ್ಯುತ್ ವೈರ್ ತಗುಲಿ ಸಾವನ್ನಪಿದವರಿಗೆ ಪರಿಹಾರ ನೀಡುವ ಬಗ್ಗೆ

ಶ್ರೀ ಸಿ.ಬಿ. ಸುರೇಶ್‌ಬಾಬು (ಚಿಕ್ಕನಾಯಕನಹಳ್ಳಿ): ಮಾನ್ಯ ಉಪಾಧ್ಯಕ್ಷರೆ, ಕಳೆದ 11ನೇ ತಾರೀಖು ನನ್ನ ಕ್ಷೇತ್ರದಲ್ಲಿ ಬುಡಕೆಗುಡ್ಲು ಎಂಬ ಗ್ರಾಮದಲ್ಲಿ 23 ವರ್ಷದ ಒಬ್ಬ ಯುವಕ ಮಧುಸೂದನ್ ಎಂಬುವವನು ಬೆಳಗಿನ ಜಾವ 5 ಗಂಟೆ ಸಮಯದಲ್ಲಿ ಅವನು ತೋಟಕ್ಕೆ ನೀರು ಕಟ್ಟುವುದಕ್ಕೆ ಹೋಗುವಂತಹ ಸಂದರ್ಭದಲ್ಲಿ ಅಲ್ಲಿ ವಿದ್ಯುತ್ ತಂತಿ ಕಿತ್ತುಕೊಂಡು ಬಿದ್ದಿದ್ದು ಅವನು ಅದನ್ನು ಕಾಣದೆ ಹೋಗಿ ತುಳಿದಂತಹ ಸಂದರ್ಭದಲ್ಲಿ ಅಲ್ಲಿಯೇ ಸಾವನ್ನು ಅಪ್ಪಿದನು. ಆ ತಾಲ್ಲೂಕಿನಲ್ಲಿ ಇದು 3ನೆಯ ಘಟನೆಯಾಗಿದೆ, ಕಳೆದ 6 ತಿಂಗಳಲ್ಲಿ ಹಿಂದೆ ಮೂಡಲಪ್ಪ ಎಂಬುವವನು ಇದೇ